ಇಂಥ ಕಡುಬಿಸಿಲಲ್ಲಿ ಎಂಥ ಚೆಲುವಿನ ನೋಟ ಈ ಮಾವು ಮರವು!
ಉರಿಉಗ್ರಬಿಸಿಲಲ್ಲಿ ಅಕೊ ಒಂಟಿಗಾಲಿನ ಮೇಲೆ
ಹಸುರು ಬಟ್ಟೆಯು ಹೊದೆದು ನಿಂತ ವೀರ ಧೀರ ತಪಸಿಯಂತೆ
ತೋರುವುದು.

ಬಾಡಿಲ್ಲ ಇದರ ಎಲೆ ಎಲೆಯಚ್ಚ ಹಸಿರು.
ನಾಲ್ಕು ದಿಕ್ಕಿಗೆ ತುಂಬಿ ನಿಂತಿವೆ ರಸರಸದ ರಂಜಣೆಗೆಯಾಗಿ.
ಏನಿದರ ತುಂಬುಕಳೆ, ನೋಟಕ್ಕೆ ಹಿರಿಹಬ್ಬ!
ಯಾರು ತಿದ್ದಿ ಮಾಡಿದರಿವರ ದುಂಡುತನದಂದವನ್ನು?
ಭೂರಮಣಿಯ ತಲೆತುರುಬಿನಂತೆ ದೂರದಿಂದ ತಲೆದೋರುವುದು.
ಹತ್ತಿರದೆ ಬರೆ ಹೂಕಾಯಿಗಳ ಹೊರೆ ಹೊರೆಯ ಅಲಂಕಾರವನುಗೈದು
ಪ್ರಸಾಧನಕಲೆಯ ಪರಮರಸಿಕೆ ಭೂರಮಣಿಯೇ
ಕಣ್ಣೆದಿರು ಎದ್ದು ನಿಂತಂತೆ ತೋರುವುದು.
ಬಿಸಿಲು ಹೆಚ್ಚಿದಂತಿವರ ಹಸಿರು ಹೆಚ್ಚುವುದು,
ಕಿರಿಕಣಿಯಾಗಿ ಹೂಗೊಂಚಲು ಹೊರೆಯೇರುವುದು,
ಕಾಯಿಗಳ ಗೊಲೆಗೊಲೆಯು ಹಿರಿಹಿಗ್ಗಿ ತೂಗುವುದು,
ಪೈರು ರಸ ತುಂಬಿ ತುಳುಕಾಡಿ ಹಸುರೆಲೆಯ ನಾಳನಾಳದಿ
ಹರಿಯುವುದು ಚಿಮ್ಮಿಚಿಮ್ಮಿ.
ಎಂಥ ಸೋಜಿಗ ಇದರ ಇರವು! ಎಲ್ಲಿಂದ ಬಂತಿದಕೆ ಈ ಬಲವು?
ಕಾಣದಿಹ ನೆಲದೊಡಲ ಒಳಒಳದಿ ಹಬ್ಬಿಕೊಂಡಿಹ ನೂರು ಬೇರುಗಳು
ನೆಲದಾಯ ಮೊಲೆಯುಂಡು ಅದರಿಂದೆ ಜೀವನರಸವನೆ ಮಾಡಿ
ಮೇಲೆ ಹರಿಯುವ ರಮ್ಯ ಮಾವಿಗೆ ನೀಡಿ
ಹೂವಿಗೆ ಕಂಪನು ಹಣ್ಣಿಗೆ ಸವಿಯನು ಎಲೆಗೆ ಪಚ್ಚೆಹಸಿರನು
ಸೂರೆಮಾಡುತಿವೆ ಉರಿವುರಿವ ಬಿಸಿಲ ಪರಿವೆಯಿಲ್ಲದಲೆ.
ಬಿಳಿಬಿಸಿಲ ನಡುಹಸಿರೆ! ಬಯಲ ಮಾವೆ!
ನಿನ್ನ ಚಿತ್ರವು ನನ್ನ ಕಣ್ಣೊಳಗೆ ಕಟ್ಟಿಹುದು ಎದೆಯೊಳಗೆ ನಟ್ಟಿಹುದು
ಅಂತರಾಳದಿ ಸೇರಿ ಹೊಸ ಆಸೆ ಆಕಾಂಕ್ಷೆಗಳನು
ಧೈರ್ಯಸ್ಥೈರ್ಯಗಳನು ಊರಿಹುದು ಬಗೆಯಲ್ಲಿ.

